1	2	3
96.	ಮಾಲಿ ಗ್ರೇಡ್-2	25
97.	ಧೋಬಿ	5
98.	ಅಟೆಂಡೆಂಟ್ ಗ್ರೇಡ್-2	106
99.	ಸ್ಯಾನಿಟರಿ ವರ್ಕರ್	66
100.	ಹೆಡ್. ವಾಚ್‌ಮನ್	1
101.	ಸ್ಟೋರ್ ವಾಚಮನ್	231
102.	ಕ್ಲೀನರ್	175
103.	ಆಟೋ ಎಲೆಕ್ಟ್ರೀಷಿಯನ್	1
104.	ದಫ್ತರಿ	67
105.	ಆಫೀಸ್ ಅಟೆಂಡೆಂಟ್ ಗ್ರೇಡ್-1	31
106.	ಆಫೀಸ್ ಅಟೆಂಡೆಂಟ್ ಗ್ರೇಡ್-2	167
107.	ವಾಚ್‌ಮನ್ (ಆಫೀಸ್)	87
108.	ಅಸಿಸ್ಟೆಂಟ್ ಡ್ರಾಫ್ಟ್‌ಮನ್	10
109.	ಟೂಲ್‌ಕೀಪರ್	5
	ಒಟ್ಟು	13,013

ವಿಷಯ :- ಹಾವೇರಿ ತಾಲ್ಲೂಕು ನಾಗನೂರು ಹತ್ತಿರ ವರದಾ ನದಿಗೆ ಕಟ್ಟುತ್ತಿರುವ ಬ್ಯಾರೇಜ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 927 (1615)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾವೇರಿ ತಾಲ್ಲೂಕು ನಾಗನೂರು ಹತ್ತಿರ ವರದಾ ನದಿಗೆ ಅಡ್ಡವಾಗಿ ಕಟ್ಟುತ್ತಿರುವ ಬ್ಯಾರೇಜ್ ಕಾರ್ಯ ಪ್ರಾರಂಭವಾದದ್ದು ಯಾವಾಗ ಈಗ ಯಾವ ಹಂತದಲ್ಲಿದೆ ;

ಆ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು? ಇದುವರೆಗೆ ಎಷ್ಟು ಖರ್ಚು ಮಾಡಲಾಗಿದೆ ;

ಇ) ಯಾವಾಗ ಪೂರ್ತಿ ಮುಗಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :-

ಅ) ಈ ಕಾಮಗಾರಿಯನ್ನು ಮಾರ್ಚ್ 91 ರಲ್ಲಿ ಪ್ರಾರಂಭ ಮಾಡಲಾಯಿತು.

ಫೌಂಡೇಷನ್ ಕಾಂಕ್ರೀಟ್ ಮುಗಿದಿದ್ದು, ಪಿಯರ್ ಮಟ್ಟದವರೆಗೆ ಕಾಂಕ್ರೀಟ್ ಕೆಲಸ ಮಾಡಲಾಗಿದೆ.

ಆ) ಈ ಯೋಜನೆಗೆ ಮಂಜೂರಾದ ಅಂದಾಜು ಮೊತ್ತ ರೂ. 53.27 ಲಕ್ಷಗಳಾಗಿದ್ದು. ಪರಿಷ್ಕೃತ ಅಂದಾಜು ಮೊತ್ತ ರೂ. 110.05 ಲಕ್ಷ ಆಗುತ್ತದೆ. ಇದುವರೆಗೆ ರೂ. 88.43 ಲಕ್ಷ ಖರ್ಚು ಮಾಡಲಾಗಿದೆ.

ಇ) ಈ ಕಾಮಗಾರಿಯನ್ನು ಮಾರ್ಚ್ 97 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ವಿಷಯ :- ಬೇಸಿಗೆಯಲ್ಲಿ ಬೇರೆ ರಾಜ್ಯಗಳಿಂದ ಖರೀದಿ ಮಾಡಿದ ವಿದ್ಯುತ್ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 928 (178)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಬೇಸಿಗೆಯಲ್ಲಿ ಉಂಟಾದ ವಿದ್ಯುತ್ ತೀವ್ರ ಕೊರತೆಯನ್ನು ನೀಗಿಸಲು ಯಾವ ಯಾವ ರಾಜ್ಯಗಳಿಂದ ಎಷ್ಟು ಪ್ರಮಾಣದ ವಿದ್ಯುತ್ ಖರೀದಿ ಮಾಡಲಾಗಿದೆ.

ಆ) ಇದಕ್ಕಾಗಿ ಕೊಡ ಮಾಡಿದ ಹಣವೆಷ್ಟು?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ್ (ಇಂಧನ ರಾಜ್ಯ ಸಚಿವರು) :-

ಅ) ಸೆಪ್ಟೆಂಬರ್ 1995 ರಿಂದ ಜೂನ್ 1996 ರ ಅವಧಿಯಲ್ಲಿ ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಿಂದ ವಿದ್ಯುತ್‌ನ್ನು ಖರೀದಿಸಿದೆ. ವಿವರಗಳು ಕೆಳಕಂಡಂತಿವೆ.

ರಾಜ್ಯ	ಅವಧಿ	ಖರೀದಿಸಿದ ವಿದ್ಯುತ್‌ನ ಪ್ರಮಾಣ
ಮಹಾರಾಷ್ಟ್ರ	ಸೆಪ್ಟೆಂಬರ್ 95 ರಿಂದ ಜೂನ್ 96 ರವರೆಗೆ	460.268 ದ.ಲಕ್ಷ ಯೂನಿಟ್ಟುಗಳು.
ತಮಿಳುನಾಡು	1-11-95 ರಿಂದ 17-11-95 ಮತ್ತು 8-12-95 ರಿಂದ 19-12-95	8.223 ದ. ಲಕ್ಷ ಯೂನಿಟ್‌ಗಳು